**A**

**CCE RR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಸೆಪ್ಟೆಂಬರ್, 2020**

**S.S.L.C. EXAMINATION, SEPTEMBER, 2020**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 09. 2020 ] ಸಂಕೇತ ಸಂಖ್ಯೆ : **83-K (Phy.)**

Date : 28. 09. 2020 ] **CODE NO. : 83-K (Phy.)**

## ವಿಷಯ : ವಿಜ್ಞಾನ

## Subject : SCIENCE

**(ಭೌತಶಾಸ್ತ್ರ / Physics)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**(ಕನ್ನಡ ಭಾಷಾಂತರ / Kannada Version)**


**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಚಂದ್ರನ ಮೇಲ್ಮೈನಿಂದ ಆಕಾಶವನ್ನು ನೋಡಿದಾಗ ಅದು ಕಪ್ಪಾಗಿ ಕಾಣುತ್ತದೆ. ಏಕೆಂದರೆ,<br>(A) ಸ್ವಲ್ಪವೇ ನೀಲಿ ಮತ್ತು ನೇರಳೆ ಬಣ್ಣಗಳು ಚದುರುತ್ತವೆ<br>(B) ಎಲ್ಲಾ ಬಣ್ಣಗಳು ಚಂದ್ರನಲ್ಲಿರುವ ವಾತಾವರಣದಿಂದ ಹೀರಲ್ಪಡುತ್ತವೆ<br>(C) ಎಲ್ಲಾ ಬಣ್ಣಗಳು ಚದುರಿಹೋಗುತ್ತವೆ<br>(D) ಬೆಳಕನ್ನು ಚದುರಿಸಲು ಅಗತ್ಯವಿರುವ ವಾತಾವರಣದ ಕಣಗಳು ಇರುವುದಿಲ್ಲ<br>***ಉತ್ತರ :*** (D) ಬೆಳಕನ್ನು ಚದುರಿಸಲು ಅಗತ್ಯವಿರುವ ವಾತಾವರಣದ ಕಣಗಳು ಇರುವುದಿಲ್ಲ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

5. ಚಿತ್ರವನ್ನು ಗಮನಿಸಿ.




$P$ ಮತ್ತು $Q$ ಗಳು ಪ್ರತಿನಿಧಿಸುತ್ತಿರುವ ಕಾಂತಧ್ರುವಗಳು ಕ್ರಮವಾಗಿ


(A) ದಕ್ಷಿಣ ( $S$ ) ಹಾಗೂ ದಕ್ಷಿಣ ( $S$ )


(B) ಉತ್ತರ ( $N$ ) ಹಾಗೂ ದಕ್ಷಿಣ ( $S$ )

(C) ಉತ್ತರ ( $N$ ) ಹಾಗೂ ಉತ್ತರ ( $N$ )


(D) ದಕ್ಷಿಣ ( $S$ ) ಹಾಗೂ ಉತ್ತರ ( $N$ )


***ಉತ್ತರ :*** (A) ದಕ್ಷಿಣ ( $S$ ) ಹಾಗೂ ದಕ್ಷಿಣ ( $S$ ) — 1

7. "  " ಎಂಬ ಇಂಗ್ಲಿಷ್ ಅಕ್ಷರದ ಪ್ರತಿಬಿಂಬವು ಪೀನದರ್ಪಣದಲ್ಲಿ ಹೀಗೆ ಕಾಣುತ್ತದೆ

(A) 


(B) 

(C) 

(D) 


***ಉತ್ತರ :*** (B)  — 1

11. ಕೊಟ್ಟಿರುವ ಅಪೂರ್ಣವಾದ ರೇಖಾಚಿತ್ರವನ್ನು ಗಮನಿಸಿ.




ವಕ್ರೀಭವನ ಕಿರಣಗಳನ್ನು ಬರೆಯುವುದರ ಮೂಲಕ ರೇಖಾಚಿತ್ರವನ್ನು ಪೂರ್ಣಗೊಳಿಸಿ ಮತ್ತು ಉಂಟಾದ ಪ್ರತಿಬಿಂಬವನ್ನು ತೋರಿಸಿ.

***ಉತ್ತರ :***




1


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಕೊನೆಯ ಬೆಂಚಿನಲ್ಲಿ ಕುಳಿತಿರುವ ಒಬ್ಬ ವಿದ್ಯಾರ್ಥಿಯು ಕಪ್ಪುಹಲಗೆಯ ಬರಹವನ್ನು ಓದಲು ಕಷ್ಟಪಡುತ್ತಾನೆ. ಆ ವಿದ್ಯಾರ್ಥಿಗೆ ಯಾವ ದೃಷ್ಟಿದೋಷ ಇದೆ ? ಅದನ್ನು ಹೇಗೆ ಸರಿಪಡಿಸಬಹುದು ?<br>*ಉತ್ತರ :*<br>★ ಆ ವಿದ್ಯಾರ್ಥಿಗೆ 'ಸಮೀಪದೃಷ್ಟಿ' (ಮಯೋಪಿಯಾ) ದೃಷ್ಟಿದೋಷವಿದೆ. ½<br>★ ಸೂಕ್ತ ಸಾಮರ್ಥ್ಯ ಹೊಂದಿದ ನಿಮ್ನ ಮಸೂರವನ್ನು ಉಪಯೋಗಿಸಿ ಈ ದೃಷ್ಟಿದೋಷವನ್ನು ಸರಿಪಡಿಸಬಹುದು. ½ | 1 |
| 16. | ಗೃಹಬಳಕೆ ವಿದ್ಯುನ್ಮಂಡಲದಲ್ಲಿ ಓವರ್‌ಲೋಡ್‌ಅನ್ನು ತಪ್ಪಿಸಲು ಯಾವುದಾದರೂ ಎರಡು ಕ್ರಮಗಳನ್ನು ತಿಳಿಸಿ.<br>*ಉತ್ತರ :*<br>★ ಸಜೀವ ತಂತಿ ಮತ್ತು ತಟಸ್ಥ ತಂತಿಗಳೆರಡೂ ನೇರ ಸಂಪರ್ಕಕ್ಕೆ ಬರದಂತೆ ನೋಡಿಕೊಳ್ಳಬೇಕು.<br>*ಅಥವಾ*<br>★ ಮಂಡಲದಲ್ಲಿ ಹೃಸ್ವ ಮಂಡಲ ಉಂಟಾಗದಂತೆ ನೋಡಿಕೊಳ್ಳಬೇಕು. ½<br>★ ಹಲವು ವಿದ್ಯುತ್ ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸಬಾರದು. ½<br>★ ಉತ್ತಮ ಗುಣಮಟ್ಟದ ತಂತಿ ಮತ್ತು ವಿದ್ಯುತ್ ಉಪಕರಣಗಳನ್ನು ಬಳಸಬೇಕು.<br>(ಯಾವುದಾದರೂ ಎರಡು) | 1 |
| 20. | ಒಂದು ಮಸೂರದ ವಸ್ತುದೂರ ಮತ್ತು ಪ್ರತಿಬಿಂಬ ದೂರಗಳು ಕ್ರಮವಾಗಿ – 30 cm ಹಾಗೂ – 10 cm ಆಗಿವೆ. ವರ್ಧನೆಯನ್ನು ಕಂಡುಹಿಡಿದು ಬಳಸಲಾಗಿರುವ ಮಸೂರದ ವಿಧ ಹಾಗೂ ಪ್ರತಿಬಿಂಬದ ಸ್ವಭಾವವನ್ನು ನಿರ್ಧರಿಸಿ.<br>*ಉತ್ತರ :*<br>★ ಇಲ್ಲಿ ವಸ್ತುದೂರ, $u = -30$ cm<br>ಪ್ರತಿಬಿಂಬದ ದೂರ $v = -10$ cm ಆಗಿದೆ.<br>∴ ವರ್ಧನೆ $m = \frac{v}{u}$<br>$= \frac{-10 \text{ cm}}{-30 \text{ cm}}$<br>$= \frac{1}{3} = +0{\cdot}33.$ 1 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

★ '$v$' ಯು ಋಣಾತ್ಮಕವಾಗಿರುವುದರಿಂದ ಬಳಸಲಾದ ಮಸೂರ ನಿಮ್ನ ಮಸೂರ ಆಗಿದೆ. ½

★ ವರ್ಧನೆಯು ಧನಾತ್ಮಕವಾಗಿರುವುದರಿಂದ ಮತ್ತು ಒಂದಕ್ಕಿಂತ ಚಿಕ್ಕದಾಗಿರುವುದರಿಂದ (ಧನ ಚಿಹ್ನೆಯನ್ನು ಹೊಂದಿರುವುದರಿಂದ) ಪ್ರತಿಬಿಂಬವು ನೇರ ಮತ್ತು ಚಿಕ್ಕದಾದ, ಮಿಥ್ಯ ಪ್ರತಿಬಿಂಬವಾಗಿದೆ. ½ 2

23. ಕೊಟ್ಟಿರುವ ವಿದ್ಯುನ್ಮಂಡಲದ ಚಿತ್ರವನ್ನು ಗಮನಿಸಿ.




ವಿದ್ಯುನ್ಮಂಡಲದ ಒಟ್ಟು ರೋಧ ಮತ್ತು ಮಂಡಲದ ಮೂಲಕ ಹರಿಯುವ ಒಟ್ಟು ವಿದ್ಯುತ್ಪ್ರವಾಹವನ್ನು ಲೆಕ್ಕಾಚಾರ ಮಾಡಿ.

***ಉತ್ತರ :***

★ ಇಲ್ಲಿ, $R_1 = 5\ \Omega$, $R_2 = 4\ \Omega$, $R_3 = 12\ \Omega$, $V = 24$ V.

ಮಂಡಲದ ಒಟ್ಟು ರೋದ, $R_T = ?$

ಒಟ್ಟು ವಿದ್ಯುತ್ಪ್ರವಾಹ, $I = ?$

***ಅಥವಾ***

| | |
|---|---|
| ∴ ಮಂಡಲದ ಒಟ್ಟು ರೋಧ $R_T = R_1 + \left[ \frac{1}{R_2} + \frac{1}{R_3} \right]$ <br> $= R_1 + \left[ \frac{R_2 \times R_3}{R_2 + R_3} \right]$ | ∴ ಮಂಡಲದ ಒಟ್ಟು ರೋಧ $R_T = R_1 + \left[ \frac{1}{R_2} + \frac{1}{R_3} \right]$ <br> $= 5\ \Omega + \left[ \frac{1}{4\Omega} + \frac{1}{12\Omega} \right]$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

| | |
|---|---|
| $= 5\ \Omega + \left[\frac{4\Omega \times 12\Omega}{4\Omega + 12\Omega}\right]$ | $= 5 + \left[\frac{3+1}{12}\right]$ |
| $= 5 + \frac{48}{16}$ | $= 5 + \frac{4}{12}$ |
| $= 5 + 3$ | $= 5 + \frac{1}{3}$ |
| $\therefore \quad R_T = 8\ \Omega$ | $= 5 + 3$ |
| | $\therefore \quad R_T = 8\ \Omega$ 1 |


★ ಮಂಡಲದ ಮೂಲಕ ಹರಿಯುವ ಒಟ್ಟು ವಿದ್ಯುತ್ಪ್ರವಾಹ $I = \frac{V}{R_T}$

$= \frac{24V}{8\ \Omega}$

$\therefore \quad I = 3A.$ 1    2

25. a) ಬೆಳಕಿನ ವಕ್ರೀಭವನದ ನಿಯಮಗಳನ್ನು ನಿರೂಪಿಸಿ.

b) ಕೊಟ್ಟಿರುವ ಚಿತ್ರದಲ್ಲಿ *AB* ಪತನಕಿರಣ, *BC* ವಕ್ರಿಮಕಿರಣ ಹಾಗೂ *MN* ಪತನಬಿಂದುವಿನಲ್ಲಿ ಎಳೆದ ಲಂಬವಾಗಿದೆ. ಯಾವ ಮಾಧ್ಯಮವು ಹೆಚ್ಚು ಸಾಂದ್ರವಾಗಿದೆ ? ಏಕೆ ?




***ಅಥವಾ***

a) ಪೀನ ದರ್ಪಣ ಮತ್ತು ನಿಮ್ನ ದರ್ಪಣಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

b) ಒಂದು ಪೀನ ಮಸೂರದ 'ಪ್ರಧಾನ ಸಂಗಮ'ವನ್ನು ನಿರೂಪಿಸಿ.

***ಉತ್ತರ :***

a) *ಬೆಳಕಿನ ವಕ್ರೀಭವನದ ನಿಯಮಗಳು :*

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

★ ಪತನ ಕಿರಣ, ವಕ್ರೀಭವನ ಕಿರಣ ಮತ್ತು ಎರಡು ಮಾಧ್ಯಮಗಳ ಸಂಪರ್ಕ ಮೇಲ್ಮೈಗೆ ಪತನ ಬಿಂದುವಿನಲ್ಲಿ ಎಳೆದ ಲಂಬ ಎಲ್ಲವೂ ಒಂದೇ ಸಮತಲದಲ್ಲಿರುತ್ತವೆ. 1

★ ಕೊಟ್ಟಿರುವ ಬೆಳಕಿನ ನಿರ್ದಿಷ್ಟ ಬಣ್ಣ ಮತ್ತು ನೀಡಿರುವ ಜೋಡಿ ಮಾಧ್ಯಮಗಳಿಗೆ ಪತನ ಕೋನದ ಸೈನು ಮತ್ತು ವಕ್ರೀಭವನ ಕೋನದ ಸೈನುಗಳ ಅನುಪಾತ ಸ್ಥಿರವಾಗಿರುತ್ತದೆ. 1

*ಅಥವಾ*

★ '$i$' ಪತನಕೋನ ಮತ್ತು '$r$' ವಕ್ರೀಭವನ ಕೋನವಾದರೆ

$\frac{\sin i}{\sin r}$ = ಸ್ಥಿರಾಂಕ

b) ★ ಮಾಧ್ಯಮ 1 ಹೆಚ್ಚು ಸಾಂದ್ರವಾಗಿದೆ. ½

★ ಏಕೆಂದರೆ, ಬೆಳಕಿನ ಕಿರಣವು ವಿರಳ ಮಾಧ್ಯಮದಿಂದ ಅಧಿಕ ಸಾಂದ್ರವಿರುವ ಮಾಧ್ಯಮವನ್ನು ಪ್ರವೇಶಿಸಿದಾಗ ಅದು ಲಂಬದ ಕಡೆಗೆ ಬಾಗುತ್ತದೆ. ½ 3


*ಅಥವಾ*

| a) *ಪೀನ ದರ್ಪಣ* | *ನಿಮ್ನ ದರ್ಪಣ* |
|---|---|
| ★ ಪ್ರತಿಫಲಿಸುವ ಮೇಲ್ಮೈ ಉಬ್ಬಾಗಿರುತ್ತದೆ. | ★ ಪ್ರತಿಫಲಿಸುವ ಮೇಲ್ಮೈ ತಗ್ಗಾಗಿರುತ್ತದೆ. |
| ★  | ★  |
| ★ ಯಾವಾಗಲೂ ಮಿಥ್ಯ ಮತ್ತು ನೇರ ಪ್ರತಿಬಿಂಬಗಳನ್ನು ಉಂಟುಮಾಡುತ್ತದೆ. | ★ ವಸ್ತುವನ್ನು $P$ ಮತ್ತು $F$ ಗಳ ನಡುವೆ ಇರಿಸಲಾದ ಸಂದರ್ಭವನ್ನು ಹೊರತುಪಡಿಸಿ, ನಿಮ್ನ ದರ್ಪಣವು ಯಾವಾಗಲೂ ಸತ್ಯ ಹಾಗೂ ತಲೆಕೆಳಗಾದ ಪ್ರತಿಬಿಂಬಗಳನ್ನು ಉಂಟುಮಾಡುತ್ತದೆ. |
| ★ ಬೆಳಕಿನ ಕಿರಣಗಳನ್ನು ವಿಕೇಂದ್ರೀಕರಿಸುತ್ತದೆ. | ★ ಬೆಳಕಿನ ಕಿರಣಗಳನ್ನು ಕೇಂದ್ರೀಕರಿಸುತ್ತದೆ. |


2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | b) ★ ಪೀನ ಮಸೂರದ ಮೇಲೆ ಪ್ರಧಾನ ಅಕ್ಷಕ್ಕೆ ಸಮಾಂತರವಾಗಿ ಪತನವಾಗುವ ಬೆಳಕಿನ ಕಿರಣಗಳು ವಕ್ರೀಭವಿಸಿದ ನಂತರ ಪ್ರಧಾನ ಅಕ್ಷದ ಒಂದು ಬಿಂದುವಿನಲ್ಲಿ ಕೇಂದ್ರೀಕರಿಸಲ್ಪಡುತ್ತವೆ. ಪ್ರಧಾನ ಅಕ್ಷದ ಮೇಲಿನ ಈ ಬಿಂದುವನ್ನು ಪೀನ ಮಸೂರದ ಪ್ರಧಾನ ಸಂಗಮ ಎಂದು ಕರೆಯುವರು. 1 | 3 |
| 28. | a) ನ್ಯೂಕ್ಲಿಯರ್ ವಿದ್ಯುತ್ ಕ್ರಿಯಾಕಾರಿಯಲ್ಲಿ ನ್ಯೂಕ್ಲೀಯ ಶಕ್ತಿಯನ್ನು ಹೇಗೆ ಉತ್ಪಾದಿಸಲಾಗುತ್ತದೆ ಎಂಬುದನ್ನು ವಿವರಿಸಿ. ನ್ಯೂಕ್ಲೀಯ ಶಕ್ತಿಯಿಂದ ವಿದ್ಯುತ್ತನ್ನು ಹೇಗೆ ತಯಾರಿಸಲಾಗುತ್ತದೆ ?<br>b) ನ್ಯೂಕ್ಲಿಯರ್ ವಿದ್ಯುತ್‌ಕ್ರಿಯಾಕಾರಿಯಿಂದಾಗುವ ಎರಡು ಅಪಾಯಗಳನ್ನು ತಿಳಿಸಿ.<br>**ಅಥವಾ**<br>a) ನಾವು ಪರ್ಯಾಯ ಇಂಧನ ಆಕರಗಳತ್ತ ಗಮನ ಹರಿಸುತ್ತಿದ್ದೇವೆ. ಏಕೆ ? ವಿವರಿಸಿ.<br>b) ಸೌರಕೋಶಗಳಿಗೆ ಸಂಬಂಧಿಸಿದ ಅನುಕೂಲತೆಗಳು ಹಾಗೂ ಅನಾನುಕೂಲತೆಗಳನ್ನು ತಿಳಿಸಿ.<br>***ಉತ್ತರ :***<br>a) ★ ನ್ಯೂಕ್ಲಿಯರ್ ವಿದ್ಯುತ್ ಕ್ರಿಯಾಕಾರಿಯಲ್ಲಿ ಪರಮಾಣು ವಿದಳನ ಕ್ರಿಯೆಯನ್ನು ಉಂಟುಮಾಡಲಾಗುತ್ತದೆ. ಭಾರಿ ಪರಮಾಣು ಬೀಜವನ್ನು (ಯುರೇನಿಯಂ, ಪ್ಲುಟೋನಿಯಂ ಅಥವಾ ಥೋರಿಯಂ) 1<br>ಕಡಿಮೆ ಶಕ್ತಿಯ ನ್ಯೂಟ್ರಾನ್‌ನಿಂದ ತಾಡಿಸಿದಾಗ ಹಗುರ ಬೀಜಗಳಾಗಿ ವಿಭಜನೆ ಹೊಂದುವುದರೊಂದಿಗೆ ಅಪಾರ ಪ್ರಮಾಣದ ಶಕ್ತಿಯು ನಿಯಂತ್ರಿತ ದರದಲ್ಲಿ ಬಿಡುಗಡೆಯಾಗುತ್ತದೆ. ½<br>★ ಬಿಡುಗಡೆಯಾದ ಈ ನ್ಯೂಕ್ಲೀಯ ಶಕ್ತಿಯನ್ನು ಹಬೆಯನ್ನು ಉತ್ಪಾದಿಸಲು ಬಳಸಿ ಅದರಿಂದ ವಿದ್ಯುತ್ ತಯಾರಿಸಲಾಗುತ್ತದೆ. ½<br>b) *ನ್ಯೂಕ್ಲಿಯರ್ ವಿದ್ಯುತ್‌ಕ್ರಿಯಾಕಾರಿಯಿಂದಾಗುವ ಅಪಾಯಗಳು :*<br>★ ಬಳಸಲಾದ ನ್ಯೂಕ್ಲಿಯ ಇಂಧನಗಳ ಅಸಮಂಜಸ ಶೇಖರಣೆ ಮತ್ತು ವಿಲೇವಾರಿ.<br>★ ವಿಕಿರಣಗಳ ಆಕಸ್ಮಿಕ ಸೋರಿಕೆಯ ಅಪಾಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ ಅತೀ ಹೆಚ್ಚು ಪರಿಸರ ಮಾಲಿನ್ಯ (ವಿಕಿರಣ ಮಾಲಿನ್ಯ) ಉಂಟಾಗುವಿಕೆ. | |
| | ★ ನ್ಯೂಕ್ಲೀಯ ಕ್ರಿಯಾಕಾರಿಯ ಸ್ಥಾಪನೆಯ ವೆಚ್ಚ ದುಬಾರಿಯಾಗಿದೆ. | |
| | ★ ಯುರೇನಿಯಂನ ಸೀಮಿತ ಲಭ್ಯತೆ. | |
| | (ಯಾವುದಾದರೂ ಎರಡು) ½ + ½ | 3 |
| | ***ಅಥವಾ*** | |
| | a) *ಪರ್ಯಾಯ ಇಂಧನ ಆಕರಗಳತ್ತ ಗಮನ ಹರಿಸುವುದಕ್ಕೆ ಕಾರಣಗಳು :* | |
| | ★ ನಮ್ಮ ಶಕ್ತಿಯ ಬೇಡಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. | |
| | ★ ಹೆಚ್ಚು ಹೆಚ್ಚು ಕಾರ್ಯಗಳನ್ನು ನಿರ್ವಹಿಸಲು ಯಂತ್ರಗಳನ್ನು ಬಳಸುತ್ತಿರುವುದರಿಂದ ಶಕ್ತಿ ಸಾಂಪ್ರದಾಯಿಕ ಆಕರಗಳು ಸಾಕಾಗುತ್ತಿಲ್ಲ. | |
| | ★ ಸಾಂಪ್ರದಾಯಕ ಶಕ್ತಿಯ ಆಕರಗಳ ಲಭ್ಯತೆ ಕಡಿಮೆ ಆಗಿದೆ. | |
| | ★ ಸಾಂಪ್ರದಾಯಿಕ ಶಕ್ತಿಯ ಆಕರಗಳ ವಿಪರೀತ ಬಳಕೆಯಿಂದಾಗಿ ಪರಿಸರ ಮಾಲಿನ್ಯದ ಸಮಸ್ಯೆಗಳು ಉಂಟಾಗುತ್ತಿವೆ. | |
| | (ಯಾವುದಾದರೂ ಎರಡು ಕಾರಣಗಳು) ½ + ½ | |
| | b) *ಸೌರಕೋಶಗಳಿಗೆ ಸಂಬಂಧಿಸಿದ ಅನುಕೂಲತೆಗಳು :* | |
| | ★ ಇವುಗಳು ಚಲನಶೀಲ ಭಾಗಗಳನ್ನು ಹೊಂದಿರುವುದಿಲ್ಲ. | |
| | ★ ಕಡಿಮೆ ನಿರ್ವಹಣೆ. | |
| | ★ ಯಾವುದೇ ಕೇಂದ್ರೀಕರಿಸುವ ಸಾಧನದ ಸಹಾಯವಿಲ್ಲದೇ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತವೆ. | |
| | ★ ಜನರು ತಲುಪಲಾಗದಂತಹ ಅಥವಾ ವಿದ್ಯುತ್ ಪ್ರಸರಣ ತಂತಿ ಅಳವಡಿಸಲು ಸಾಧ್ಯವಾಗದ ದುರ್ಗಮ ಪ್ರದೇಶದಲ್ಲೂ ಕೂಡ ಸೌರಫಲಕಗಳನ್ನು ಅಳವಡಿಸಬಹುದು. | |
| | (ಯಾವುದಾದರೂ ಎರಡು ಅನುಕೂಲಗಳು) ½ + ½ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಸೌರಕೋಶಗಳಿಗೆ ಸಂಬಂಧಿಸಿದ ಅನಾನುಕೂಲತೆಗಳು :*<br>★ ಸೌರಕೋಶಕ್ಕಾಗಿ ಬಳಸುವ ವಿಶೇಷ ದರ್ಜೆಯ ಸಿಲಿಕಾನ್‌ನ ಲಭ್ಯತೆ ಸೀಮಿತವಾಗಿದೆ.<br>★ ಸೌರಕೋಶದ ಉತ್ಪಾದನೆಯ ಪ್ರಕ್ರಿಯೆಯು ಹೆಚ್ಚು ದುಬಾರಿಯಾಗಿದೆ.<br>★ ಸೌರಫಲಕದಲ್ಲಿ ಸೌರಕೋಶಗಳನ್ನು ಒಂದಕ್ಕೊಂದು ಸಂಪರ್ಕಿಸಲು ಬಳಸಲಾಗುವ ಬೆಳ್ಳಿಯು ಅತ್ಯಂತ ದುಬಾರಿಯಾಗಿದೆ.<br>★ ಇವುಗಳ ಕಾರ್ಯಕ್ಷಮತೆ ಕಡಿಮೆಯಾಗಿದೆ.<br>(ಯಾವುದಾದರೂ ಎರಡು ಅನಾನುಕೂಲಗಳು) ½ + ½ | 3 |
| 31. | ಬಿಳಿ ಬಣ್ಣದ ರೋಹಿತದ ಪುನರ್ ಸಂಯೋಜನೆಯ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ.<br>a) ಅತ್ಯಂತ ಹೆಚ್ಚು ಬಾಗುವ ಬೆಳಕಿನ ಕಿರಣ<br>b) ಅತ್ಯಂತ ಕಡಿಮೆ ಬಾಗುವ ಬೆಳಕಿನ ಕಿರಣ<br>***ಉತ್ತರ :***<br>*ಬಿಳಿ ಬಣ್ಣದ ರೋಹಿತದ ಪುನರ್ ಸಂಯೋಜನೆಯ ಚಿತ್ರ :*<br><br><br>ಚಿತ್ರಕ್ಕೆ 2<br>ಭಾಗಗಳಿಗೆ ½ + ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಕೊಟ್ಟಿರುವ ಚಿತ್ರವನ್ನು ಗಮನಿಸಿ. ಚಿತ್ರಕ್ಕೆ ಸಂಬಂಧಿಸಿದ ಪ್ರಯೋಗವನ್ನು ವಿವರಿಸಿ. ಈ ಪ್ರಯೋಗದಿಂದ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು ? | |




***ಉತ್ತರ :***

| | | |
|---|---|---|
| ★ | ತಾಮ್ರದ ತಂತಿಯ ಸುರುಳಿ ( *AB* ) ಯ ತುದಿಗಳನ್ನು ಗೆಲ್ವೆನೋಮೀಟರ್‌ಗೆ ಸಂಪರ್ಕಿಸಿ, ( *NS* ) ದಂಡಕಾಂತವನ್ನು ತೆಗೆದುಕೊಂಡು ಅದರ ಉತ್ತರ ಧ್ರುವವನ್ನು ಸುರುಳಿಯ ಒಳಗೆ ದೂಡಿದಾಗ, ಸುರುಳಿಯಲ್ಲಿ ಪ್ರೇರಿತ ವಿದ್ಯುತ್‌ಪ್ರವಾಹ ಏರ್ಪಟ್ಟು ಗೆಲ್ವೆನೋಮೀಟರ್‌ನಲ್ಲಿ ಸೂಚಕವು ಒಂದು ದಿಕ್ಕಿಗೆ ಕ್ಷಣಿಕ ವಿಚಲನೆ ಹೊಂದುತ್ತದೆ. | 1 |
| ★ | ಸುರುಳಿಯಿಂದ ಕಾಂತವನ್ನು ಹಿಂದಕ್ಕೆ ತೆಗೆದುಕೊಂಡಾಗ ಗೆಲ್ವೆನೋಮೀಟರ್‌ನಲ್ಲಿ ಸೂಚಕವು ವಿರುದ್ಧ ದಿಕ್ಕಿನಲ್ಲಿ ವಿಚಲನೆ ಹೊಂದುತ್ತದೆ. | ½ |
| ★ | ಕಾಂತವನ್ನು ಸುರುಳಿಯಲ್ಲಿ ನಿಶ್ಚಲವಾಗಿರಿಸಿದಾಗ ಗೆಲ್ವೆನೋಮೀಟರ್‌ನಲ್ಲಿ ಯಾವುದೇ ವಿಚಲನೆ ಕಂಡುಬರುವುದಿಲ್ಲ. | ½ |
| ★ | ಕಾಂತವನ್ನು ಸುರುಳಿಯಲ್ಲಿ ಅಧಿಕ ಬಲದಿಂದ / ವೇಗದಿಂದ ಒಳದೂಡಿದಾಗ, ಗೆಲ್ವೆನೋಮೀಟರ್‌ನಲ್ಲಿ ವಿಚಲನೆ ಅಧಿಕವಾಗಿರುತ್ತದೆ ಮತ್ತು ಕಾಂತವನ್ನು ಕಡಿಮೆ ಬಲದಿಂದ / ನಿಧಾನವಾಗಿ ಒಳದೂಡಿದಾಗ ಗೆಲ್ವೆನೋಮೀಟರ್‌ನಲ್ಲಿ ವಿಚಲನೆಯ ಪ್ರಮಾಣ ಕಡಿಮೆಯಾಗಿರುತ್ತದೆ. ಕಾಂತವನ್ನು ನಿಶ್ಚಲವಾಗಿಟ್ಟು ಸುರುಳಿಯನ್ನು ಕಾಂತದ ಕಡೆಗೆ / ಕಾಂತದಿಂದ ದೂರ ಚಲಿಸುವಂತೆ ಮಾಡಿದಾಗಲೂ ಗೆಲ್ವೆನೋಮೀಟರ್ ವಿಚಲನೆಯನ್ನು ತೋರಿಸುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಈ ಪ್ರಯೋಗದಿಂದ ತೆಗೆದುಕೊಳ್ಳಬಹುದಾದ ತೀರ್ಮಾನಗಳು :* | |
| | ★ ಸುರುಳಿಗೆ ಹೊಂದಿಕೊಂಡಿರುವ ಕಾಂತದ ಚಲನೆಯು ಪ್ರೇರಿತ ವಿಭವಾಂತರವನ್ನು ಉತ್ಪತ್ತಿ ಮಾಡುತ್ತದೆ. ಇದು ಮಂಡಲದಲ್ಲಿ ಪ್ರೇರಿತ ವಿದ್ಯುತ್ಪ್ರವಾಹವನ್ನು ಉಂಟುಮಾಡುತ್ತದೆ. 1 | |
| | ***ಅಥವಾ*** | |
| | ★ ಸುರುಳಿಯಲ್ಲಿ ಪ್ರೇರಿತವಾಗುವ ವಿದ್ಯುತ್ಪ್ರವಾಹದ ದಿಕ್ಕು ಸುರುಳಿಯಲ್ಲಿ ಚಲಿಸುವ ಕಾಂತದ ದಿಕ್ಕನ್ನು ಅವಲಂಬಿಸಿದೆ. | |
| | ★ ಸುರುಳಿಯಲ್ಲಿ ಪ್ರೇರಿತವಾಗುವ ವಿದ್ಯುತ್ಪ್ರವಾಹದ ಪ್ರಮಾಣವು ಸುರುಳಿಯಲ್ಲಿ ಚಲಿಸುವ ಕಾಂತದ ಬಲ / ವೇಗಕ್ಕೆ ನೇರ ಅನುಪಾತದಲ್ಲಿರುತ್ತದೆ. | 4 |
| 38. | "ಎರಡು ಬಿಂದುಗಳ ನಡುವಿನ ವಿಭವಾಂತರ 1 V." ಈ ಹೇಳಿಕೆಯ ಅರ್ಥವನ್ನು ತಿಳಿಸಿ ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ. ಒಂದು ವಾಹಕದ ರೋಧ ಎಂದರೇನು ? ವಿದ್ಯುತ್ ಸಾಮರ್ಥ್ಯ ಎಂದರೇನು ? ಅದನ್ನು ಕಂಡುಹಿಡಿಯಲು ಬಳಸುವ ಮೂರು ಸೂತ್ರಗಳನ್ನು ಬರೆಯಿರಿ. | |
| | ***ಉತ್ತರ :*** | |
| | ★ ಯಾವುದೇ ಅನುಕ್ರಮವಾದ ವಿದ್ಯುತ್ ವಾಹಕದ ಎರಡು ಬಿಂದುಗಳ ನಡುವೆ 1 ಕೂಲಾಮ್ ( 1 C ) ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ 1 ಜೌಲ್ ( 1J ) ಕೆಲಸ ನಡೆದರೆ, ಆ ಎರಡು ಬಿಂದುಗಳ ನಡುವಿನ ವಿಭವಾಂತರ 1 V ಆಗಿರುತ್ತದೆ. 1 | |
| | ★ ಅದನ್ನು ಅಳೆಯಲು ಬಳಸುವ ಸಾಧನ ವೋಲ್ಟ್‌ಮೀಟರ್ ಆಗಿದೆ. ½ | |
| | ★ ಒಂದು ವಾಹಕವು ತನ್ನ ಮೂಲಕ ಹರಿಯುವ ವಿದ್ಯುದಾವೇಶಗಳ ಹರಿಯುವಿಕೆಗೆ ಅಡ್ಡಿ ಅಥವಾ ಅಡಚಣೆ ಉಂಟು ಮಾಡುವ ಲಕ್ಷಣವನ್ನು ಆ ವಾಹಕದ 'ರೋಧ' ಎಂದು ಕರೆಯುವರು. 1 | |
| | ★ ವಿದ್ಯುನ್ಮಂಡಲದಲ್ಲಿ ಶಕ್ತಿ ಬಳಕೆಯಾಗುವ ಅಥವಾ ಕ್ಷೀಣಿಸುವ ದರವನ್ನು 'ವಿದ್ಯುತ್ ಸಾಮರ್ಥ್ಯ' ಎಂದು ಕರೆಯುವರು. 1 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | ★ ವಿದ್ಯುತ್ ಸಾಮರ್ಥ್ಯವನ್ನು ಕಂಡುಹಿಡಿಯಲು ಬಳಸುವ ಮೂರು ಸೂತ್ರಗಳು | | |
| | → $P = VI$ or $P = IV$ | ½ | |
| | → $P = I^2R$ | ½ | |
| | → $P = \frac{V^2}{R}$ | ½ | 5 |